

# ಅಂಜಲಿ ಅನೀಶ್ ಆತ್ಮವಿಶ್ವಾಸದ ಹೊಳಪು

‘ಪದವಿಪೂರ್ವ’ ಸಿನಿಮಾದಲ್ಲಿ ಮುದ್ದು ಹುಡುಗಿಯಾಗಿ ಕಾಣಿಸಿಕೊಂಡು ಯುವಜನರ ಮನ ಗೆದ್ದಿದ್ದ ಅಂಜಲಿ ಅನೀಶ್ ಈಗ ಯೋಗರಾಜ ಭಟ್ಟರ ‘ಮನದ ಕಡಲು’ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಕಾನೂನು ಪದವಿ ಓದುತ್ತಲೇ ಸಿನಿಮಾ ಬಗ್ಗೆಯೂ ಆಸಕ್ತಿ ಬೆಳೆಸಿಕೊಂಡಿದ್ದ ಅಂಜಲಿ, ಪದವಿ ಪೂರ್ಣಗೊಳಿಸಿದ್ದು, ಮೂರು ವರ್ಷಗಳ ಓದಿನ ನಂತರ ಉತ್ಸಾಹದಿಂದ ಸಿನಿಮಾದಲ್ಲಿ ತೊಡಗಿಕೊಂಡಿರುವುದರ ಕುರಿತು ಖುಷಿ ಹಂಚಿಕೊಂಡಿದ್ದಾರೆ.

‘‘ಪದವಿ ಪೂರ್ವ’ ಸಿನಿಮಾ ಮಾಡಿದಾಗ ನಾನಿನ್ನೂ ಟೀನೇಜ್. ಈಗ ಮೂರು ವರ್ಷಗಳು ಕಳೆದಿವೆ. ಈಗ ಸಿನಿಮಾರಂಗದ ಬಗ್ಗೆ ಆತ್ಮವಿಶ್ವಾಸವೂ ಹೆಚ್ಚಿದೆ. ಆ ಆತ್ಮವಿಶ್ವಾಸ ಸಿನಿಮಾದಲ್ಲಿ, ನನ್ನ ಪಾತ್ರದಲ್ಲಿ ಎದ್ದು ಕಾಣುತ್ತದೆ’’ ಎಂದಿದ್ದಾರೆ.

‘ನಾನು ಕಾನೂನು ಪದವಿ ಮಾಡುವಾಗಲೂ ನಟನೆಯೆಡೆಗೆ ನನ್ನ ಮನಸ್ಸು ಸದಾ ತುಡಿಯುತ್ತಿತ್ತು. ನನ್ನಲ್ಲಿನ ನಟನೆಯ ಹಸಿವು ಈ ಪಾತ್ರದಲ್ಲಿ ನನ್ನಿಂದ ಅತ್ಯುತ್ತಮವಾದುದನ್ನು ನೀಡಲು ಸಾಧ್ಯವಾಗಿಸಿದೆ. ಸಿನಿಮಾರಂಗದ ಬಗ್ಗೆ ಹಿಂದಿಗಿಂತಲೂ ಹೆಚ್ಚು ಉತ್ಸಾಹ ಬಂದಿದೆ. ಈಗ ನಾನು ನಟನೆಯಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನು ತಿಳಿದುಕೊಳ್ಳುತ್ತಿದ್ದೇನೆ. ಸದ್ಯ ಮತ್ತೆರಡು ಸಿನಿಮಾಗಳು ಪೈಪ್‌ಲೈನ್‌ನಲ್ಲಿವೆ. ನಟಿಯಾಗಿ ನನ್ನನ್ನು ನಾನು ರೀಡಿಫೈನ್ ಮಾಡಿಕೊಳ್ಳುವೆ’ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.

‘ಮನದ ಕಡಲು’ ಸಿನಿಮಾದಲ್ಲಿ ತಮ್ಮ ಪಾತ್ರದ ಬಗ್ಗೆ ಮಾತನಾಡಿರುವ ಅವರು, ‘ಬಹು ಆಯಾಮಗಳನ್ನು ಹೊಂದಿರುವ ಪಾತ್ರ ಇದಾಗಿದ್ದು, ವೃತ್ತಿಯಲ್ಲಿ ಪ್ಯಾಷನೇಟ್, ಉತ್ತಮ ಸಂಗಾತಿ ಹಾಗೂ ಖುಷಿ ಖುಷಿಯಾಗಿರುವ ವ್ಯಕ್ತಿ ಈ ಮೂರೂ ವ್ಯಕ್ತಿತ್ವ, ಭಿನ್ನ ಆಯಾಮಗಳನ್ನೂ ತೋರುವ ಸವಾಲಿನ ಪಾತ್ರ ನನ್ನದು. ನನ್ನ ಕರಿಯರ್‌ನಲ್ಲೇ ಹೆಚ್ಚು ಪ್ರತಿಫಲ ನೀಡಬಹುದೆಂದು ಅಪೇಕ್ಷಿಸಿರುವ ಪಾತ್ರ. ಯೋಗರಾಜ್ ಭಟ್ ಹಾಗೂ ರಂಗಾಯಣ ರಘು ಅವರೊಂದಿಗೆ ಕೆಲಸ ಮಾಡುವುದು ಅತ್ಯುತ್ತಮ ಅವಕಾಶ’ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ■



# 2025 ಅದೃಷ್ಟದ ನಿರೀಕ್ಷೆಯಲ್ಲಿ ಪ್ರಜ್ವಲ್

**2024 –** ವರ್ಷವಿಡೀ ಹಲವು ಸಿನಿಮಾಗಳಲ್ಲಿ ಎಂಗೇಜ್ ಆಗಿದ್ದ ನಟ ಪ್ರಜ್ವಲ್ ದೇವರಾಜ್, 2025 ತಮ್ಮ ಪಾಲಿಗೆ ಅದೃಷ್ಟ ತರುವ ಭರವಸೆ ಹೊಂದಿದ್ದಾರೆ.

ಹಲವು ಸಿನಿಮಾಗಳಲ್ಲಿ ಪ್ರಜ್ವಲ್ ತೊಡಗಿಕೊಂಡಿದ್ದರೂ, ಅವರ ಯಾವುದೇ ಸಿನಿಮಾ ಈ ವರ್ಷ ಬಿಡುಗಡೆ ಆಗಿಲ್ಲ. ಈ ಎಲ್ಲ ಸಿನಿಮಾಗಳೂ 2025ರಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದ್ದು, ತಮ್ಮ ಕರಿಯರ್‌ನಲ್ಲಿ ಉತ್ಸಾಹ ತುಂಬುವ ವರ್ಷ ಇದಾಗುವ ಭರವಸೆ ಅವರಿಗಿದೆ.

‘ನನಗೆ ಏನನ್ನೂ ಮಿಸ್ ಮಾಡಿಕೊಂಡೆ ಎನಿಸುತ್ತಿಲ್ಲ. ಏಕೆಂದರೆ ನಾನು ಸಿನಿಮಾಗಳಲ್ಲಿಯೇ ತೊಡಗಿಕೊಂಡಿದ್ದೆ. ಮುಂದಿನ ವರ್ಷ ನನ್ನ ಸಿನಿಮಾಗಳು ಬಿಡುಗಡೆಯಾಗುತ್ತಿವೆ. ನಾನು ಒಳ್ಳೆಯ ಪ್ರಾಜೆಕ್ಟ್ ಆರಿಸಿಕೊಳ್ಳಲು ಸಮಯ ತೆಗೆದುಕೊಂಡೆ ಎನ್ನುವುದು ಸಿನಿಮಾ ನೋಡಿದ ಜನರಿಗೂ ತಿಳಿಯುತ್ತದೆ’ ಎಂದಿದ್ದಾರೆ.

‘ಗಣ’, ‘ಮಾಫಿಯಾ’ ಹಾಗೂ ‘ರಾಕ್ಷಸ’ ಎಂಬ ಮೂರು ಸಿನಿಮಾಗಳಲ್ಲಿ ಪ್ರಜ್ವಲ್ ಅಭಿನಯಿಸುತ್ತಿದ್ದು, ಅವೆಲ್ಲವೂ ಪೂರ್ಣಗೊಂಡಿವೆ. ಸದ್ಯ ‘ಚೀತಾ’, ಗುರುದತ್ ಗಾಣಿಗ ನಿರ್ದೇಶನದ ‘ಕರಾವಳಿ’ಯಲ್ಲಿಯೂ ಪ್ರಜ್ವಲ್ ನಟಿಸಿದ್ದು, ಭಾರೀ ನಿರೀಕ್ಷೆ ಹುಟ್ಟಿಸಿವೆ.

‘‘ಈ ವರ್ಷ ಜನವರಿಯಲ್ಲಿ ‘ಮಾಫಿಯಾ’ ಸಿನಿಮಾ ಶುರುಮಾಡಿದೆ. ನಂತರ ‘ರಾಕ್ಷಸ’ದಲ್ಲಿ ತೊಡಗಿಕೊಂಡೆ. ‘ಗಣ’, ‘ಚೀತಾ’, ‘ಕರಾವಳಿ’ ಸಿನಿಮಾಗಳೂ ಹಾದಿಯಲ್ಲಿವೆ. ಪ್ರತಿ ಸಿನಿಮಾ ಕೂಡ ವಿಶೇಷವಾದದ್ದನ್ನು ನೀಡಲಿದೆ. ಕಮರ್ಷಿಯಲ್ ಧಾಟಿಯಲ್ಲಿ ಒಳ್ಳೆಯ ಕಥೆಗಳನ್ನು ನೀಡಲಿದೆ’’ ಎಂದಿದ್ದಾರೆ. ■